ಒ ಎಸ್ 109/2023 ಡಿ.ಡಬ್ಲ್ಯೂ:2

ಇಂದು ದಿ: 15.04.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲು: ವಾದಿ ಪರ ಶ್ರೀ ಕೆ ಎಸ್ ಎನ್ ವಕೀಲರಿಂದ:

ದಾವೆಯಲ್ಲಿ ಹೇಳಿರುವ ವಂಶವೃಕ್ಷದ ಪ್ರಕಾರ ನಾವೆಲ್ಲ ನಂಜುಂಡ ಆರಾಧ್ಯ ಮತ್ತು ಸುಶೀಲ ರವರ ಮಕ್ಕಳು ಎಂದರೆ ಸರಿ. ನನ್ನ ತಂದೆ 2019 ಮತ್ತು ತಾಯಿ 2021 ರಲ್ಲಿ ಮೃತಪಟ್ಟಿದ್ದು ನಂತರ ನಾವು ತಂದೆ ತಾಯಿಯ ಆಸ್ತಿಯಲ್ಲಿ ಜಂಟಿ ಸ್ವಾಧೀನಲ್ಲಿ ಇದ್ದೇವೆ ಎಂದರೆ ಸರಿ. ಈಗಾಗಲೇ ನಾವು ದಾವಾ ಐಟಂ ನಂಬರ 1 ಮತ್ತು ದಾವಾ ಐಟಂ 4ರ ಮನೆಯ ಖಾತೆಯನ್ನು ಪೌತಿ ಖಾತೆ ಮಾಡಿಸಿಕೊಂಡಿದ್ದೇವೆ ಎಂದರೆ ಸರಿ. 2ನೇ ಐಟಂ ಆಸ್ತಿ ಈಗ ನನ್ನ ತಂದೆ ಹೆಸರಿನಲ್ಲಿ ಮುಂದುವರೆದಿದೆ. ಅದೇ ರೀತಿ 3ನೇ ಐಟಂ ಆಸ್ತಿಯು ನನ್ನ ತಾಯಿ ಹೆಸರಿನಲ್ಲಿ ಮುಂದುವರೆಯುತ್ತಿದೆ. ನಂತರದ ದಿನಗಳಲ್ಲ ಯಾವ ಯಾವ ಆಸ್ತಿ ಯಾರಿಗೆ ಎಂದು ತೀರ್ಮಾನ ಮಾಡಿದ್ದೇವೆ ಆದರೆ ವಿಭಾಗ ಪತ್ರ ಮಾಡಿಕೊಂಡಿಲ್ಲ. ಪ್ರಭುಲಿಂಗಾರಾಧ್ಯರವರು ಹೇಳಿದ ಹಾಗೆ ವಿಭಾಗ ಪತ್ರ ಮಾಡಿಕೊಂಡಿಲ್ಲ. 4ನೇ ಐಟಂ ಆಸ್ತಿಯ ಮನೆಯು ಶಿಥಿಲಾವಸ್ಥೆಗೆ ಹೋಗಿತ್ತು, ಅದಕ್ಕೆ 7 ಲಕ್ಷ ಖರ್ಚು ಮಾಡಿ ಗುತ್ತಿಗೆದಾರರ ಮೂಲಕ ರಿಪೇರಿ ಮಾಡಿಸಿದ್ದೇನೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಆ ರೀತಿ 2ನೇ ಪ್ರತಿವಾದಿ ಆ ರೀತಿ ರಿಪೇರಿ ಮಾಡಿಸಿಕೊಳ್ಳಿ ನಂತರ ನಿಮಗೆ ಮನೆ ಆಗುತ್ತದೆ ಎಂದು ಹೇಳಿದದರು ವಾದಿ ಮತ್ತು 2ನೇ ಪ್ರತಿವಾದಿ ಆ ರೀತಿ ಹೇಳಿದ್ದರು ಎನ್ನುವುದು ಸುಳ್ಳು ಮತ್ತು ನಾನು 7 ಲಕ್ಷ ಖರ್ಚು ಮಾಡಿದ್ದೇನೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಒಂದು ವೇಳೆ ದಾವೆ ಡಿಕ್ರಿಯಾದರೆ ನಾನು ಖರ್ಚು ಮಾಡಿರುವ 7 ಲಕ್ಷ ರೂ ಗಳನ್ನು ವಾದಿಗಳು ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ, ಆದರೆ ನಾವು ರಿಪೇರಿ ಮಾಡಿಸಿದ್ದು ನಿಜ. ದಾವಾ ಆಸ್ತಿಯಲ್ಲಿ ತಂಗಿಯರಿಗೂ ಸಹ ಭಾಗ ಕೊಡಬೇಕಾಗುತ್ತದೆ ಎಂದರೆ ನಾವು ಭಾಗ ಕೊಡುತ್ತೇವೆ ಎಂದು ಯಾವತ್ತೋ ಹೇಳಿದ್ದೇವೆ. ವಿನಾಕಾರಣ ಭಾಗ ಕೊಡದೇ ಕಾಲ ವಿಳಂಬ ಮಾಡಿದ್ದೇವೆ ಎಂದರೆ ಸುಳ್ಳು. ವಾದಿಗೆ ದಾವಾ ಆಸ್ತಿ ಪಿತ್ರಾರ್ಜಿತ ಆಸ್ತಿಯಾದ ಕಾರಣ ವಾದಿಗೆ 1/3 ಭಾಗಾಂಶದ ಹಕ್ಕು ಇದೆ ಎಂದರೆ ಸರಿ.

ಮರುವಿಚಾರಣೆ: ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.